ಸಿ.ಸಿ .ನಂ. 14/2023 ಪಿಡಬ್ಲೂಃ 1

ದಿನಾಂಕಃ 03-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

3. ಸಾಲಗಾರ ಯಾವ ಇಸ್ವಿಯಲ್ಲಿ ನಮ್ಮ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಪಡೆದಿದ್ದಾರೆ ನೆನಪಿಲ್ಲ . ಸಾಲದ ಅರ್ಜಿಯನ್ನು ಕೊಡುವ ಪೂರ್ವದಲ್ಲಿ ಸಾಲಗಾರರಿಗೆ ಸಾಲವನ್ನು ನೀಡಿಲ್ಲ . ಸಾಲಗಾರ ಸಾಲದ ಅರ್ಜಿಯನ್ನು ಸಲ್ಲಿಸಿದಾಗ ನಾನು ಶಾಖಾ ವ್ಯವಸ್ಥಾಪಕನಾಗಿರಲಿಲ್ಲ. ಆ ಸಂದರ್ಭದಲ್ಲಿ ರಘು ಶಂಭು ಭಟ್ ಶಾಖಾ ವ್ಯವಸ್ಥಾಪಕರಾಗಿದ್ದರು . ನಾನು ಸಾಲದ ಅರ್ಜಿ ನೀಡುವ ಸಂದರ್ಭದಲ್ಲಿ ನಾನು ಶಾಖಾ ವ್ಯವಸ್ಥಾಪಕನಾಗಿರದೇ ಇದ್ದ ಕಾರಣ ನನಗೆ ಸಾಲದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಸಾಲದ ಅರ್ಜಿ ಬಂದ ಸಂದರ್ಭದಲ್ಲಿ ನಾನು ಫಿರ್ಯಾದು ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ . ಆ ಸಂದರ್ಭದಲ್ಲಿ ಸಾಲಕ್ಕೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದಾರೆ ನಾನು ದಾಖಲಾತಿಗಳನ್ನು ನೋಡಿ ಮಾಹಿತಿ ಮಾಡಿಕೊಂಡಿದ್ದೇನೆ . ಹಳೇಯ ಮ್ಯಾನೇಜರ್ ನಿವೃತ್ತಿ ಹೊಂದಿರುತ್ತಾರೆ. ಅವರಲ್ಲಿ ನಾನು ಈ ಸಾಲದ ಬಗ್ಗೆ ತಿಳಿದುಕೊಂಡಿರುತ್ತೇನೆ . ಸಾಲದ ಅರ್ಜಿಯನ್ನು ದಿಃ 26-03-2017 ರಂದು ಕೊಟ್ಟಿರುತ್ತಾರೆ . ಸಾಲದ ಅರ್ಜಿಯಲ್ಲಿ ವೈಯಕ್ತಿಕ ಉದ್ದೇಶಕ್ಕೆ ಸಾಲ ಬೇಕು ಎಂದು ಕೇಳಿ ಅರ್ಜಿ ಸಲ್ಲಿಸಿರುತ್ತಾರೆ . ವೈಯಕ್ತಿಕ ಉದ್ದೇಶ ಎಂದು ಸಾಲದ ಅರ್ಜಿಯಲ್ಲಿ ನಮೂದು ಮಾಡಿಲ್ಲ. ವೈಯಕ್ತಿಕ ಉದ್ದೇಶ ಎಂದು ನ್ಯಾಯಾಲಯದಲ್ಲಿ ಇದೇ ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ . ನಮ್ಮ ದಾಖಲಾತಿಗಳಲ್ಲಿ ವೈಯಕ್ತಿಕ ಉದ್ದೇಶ ಎಂದು ನಮೂದು ಮಾಡಿಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಗರಿಷ್ಠವಾಗಿ ವೈಯಕ್ತಿಕ ಸಾಲ ಒಂದು ಲಕ್ಷದವರೆಗೆ ಕೊಡುತ್ತೇವೆ . ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಸಾಲದ ಅರ್ಜಿಯನ್ನು ಸಲ್ಲಿಸಿದರೆ ಅದು ಬೇರೆ ಯೋಜನೆಗೆ ಇರುತ್ತದೆ . ಈ ಕೇಸಿನಲ್ಲಿ ಮೂರು ಲಕ್ಷ ರೂಪಾಯಿ ಸಾಲವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ಸಾಲಗಾರರಿಗೆ ನೀಡಿರುವ ಸಾಲ ವೇತನ

ಆಧಾರಿತ ಸಾಲವಾಗಿರುತ್ತದೆ. ವೈಯಕ್ತಿಕ ಸಾಲದ ಬಗ್ಗೆ ಯಾವುದೇ ಅಪ್ಲಿಕೇಶನ್ ತೆಗೆದುಕೊಂಡಿಲ್ಲ. ಆ ರೀತಿ ಯಾವುದೇ ವೈಯಕ್ತಿಕ ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ವೈಯಕ್ತಿಕ ಸಾಲದ ಅರ್ಜಿ ಹಾಗೂ ವೇತನ ಆಧಾರಿತ ಸಾಲದ ಅರ್ಜಿ ಎರಡು ಅರ್ಜಿಯನ್ನು ಒಂದೇ ಸಾಲಕ್ಕೆ ಸಂಬಂಧಪಟ್ಟಂತೆ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿ . ಸಾಕ್ಷಿ ಸ್ವತ ವೈಯಕ್ತಿಕ ಸಾಲ ಹಾಗೂ ವೇತನ ಆಧಾರಿತ ಸಾಲಕ್ಕೆ ಒಂದೇ ನಮೂನೆ ಇದೆ ಎಂದು ನುಡಿದಿರುತ್ತಾರೆ . ವೇತನ ಆಧಾರಿತ ಅರ್ಜಿ ಹಾಗೂ ವೈಯಕ್ತಿಕ ಸಾಲದ ಅರ್ಜಿ ಎಂದು ನಿಪಿ -9 ಮತ್ತು ನಿಪಿ-10 ಎರಡು ಅರ್ಜಿಗಳನ್ನು ಹಾಜರು ಪಡಿಸಿದ್ದೇವೆ ಎಂದರೆ ಸಾಕ್ಷಿ ಎರಡು ಅರ್ಜಿ ನಮೂನೆಗಳು ಒಂದೇ ಇದೆ ಎಂದು ನುಡಿದಿರುತ್ತಾರೆ . ಈ ಎರಡು ಅರ್ಜಿಗಳಲ್ಲಿ ಯಾವುದು ಮೂಲ ಅರ್ಜಿ ಎಂದರೆ ಸಾಕ್ಷಿ ಎರಡು ಅರ್ಜಿಗಳು ಒಂದೇ , ವೇತನ ಆಧಾರಿತ ಅರ್ಜಿ ಮೂಲ ಅರ್ಜಿ ಎಂದು ನುಡಿದಿರುತ್ತಾರೆ. ಸಾಲದ ಅರ್ಜಿಯನ್ನು ಕೊಟ್ಟ ನಂತರ ಅದನ್ನು ಆಡಳಿತ ಮಂಡಳಿಯ ಮುಂದೆ ಇಡಬೇಕಾಗುತ್ತದೆ ಎಂದರೆ ಸರಿ . ಸಾಲದ ಅರ್ಜಿಯಲ್ಲಿ ಸರಿಯಾಗಿ ನಮೂದಾಗದೇ ಇದ್ದಾಗ ಆಡಳಿತ ಮಂಡಳಿ ಅದನ್ನು ತಿರಸ್ಕರಿಸುವ ಸಂದರ್ಭ ಇರುತ್ತದೆ ಎಂದರೆ ಸರಿಯಲ್ಲ. ದಾಖಲಾತಿ ಸರಿ ಇಲ್ಲದ ಪಕ್ಷದಲ್ಲಿ ದಾಖಲಾತಿ ಸರಿ ಇಲ್ಲ ಎಂದು ಕಳುಹಿಸುತ್ತಾರೆಯೇ ಹೊರತು ತಿರಸ್ಕರಿಸುವುದಿಲ್ಲ . ಈ ಸಾಲದ ಅರ್ಜಿ ಆಡಳಿತ ಮಂಡಳಿಯ ಮುಂದೆ ಹೋಗಿ ಮಂಜೂರಾತಿಯನ್ನು ಪಡೆಯುವಂತಹ ಅರ್ಜಿ ಎಂದರೆ ಸರಿ . ನಾನು ಆ ಸಮಯದಲ್ಲಿ ಮ್ಯಾನೇಜರ್ ಆಗಿಲ್ಲದೇ ಇರುವ ಕಾರಣ ಆಡಳಿತ ಮಂಡಳಿಯ ಮುಂದೆ ಯಾವ ಅರ್ಜಿಯನ್ನು ಕಳಿಹಿಸಲಾಗಿತ್ತೋ ಹೇಳಲು ಆಗುವುದಿಲ್ಲ ಎಂದರ ಸಾಕ್ಷಿ ಠರಾವಿನಲ್ಲಿ ಅರ್ಜಿಯ ಬಗ್ಗೆ ನಮೂದಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ . ಠರಾವಿನಲ್ಲಿ ಅರ್ಜಿಯ ಸಂಖ್ಯೆ , ದಿನಾಂಕ ನಮೂದಾಗಿರುತ್ತದೆ ಎಂದರೆ ಸರಿ . ಠರಾವನ್ನು ನೋಡಿದರೆ ಮಾತ್ರ ಯಾವ ಅರ್ಜಿಯನ್ನು ಆಡಳಿತ ಮಂಡಳಿಯ ಮುಂದೆ ಕಳುಹಿಸಿದ್ದರು ಗೊತ್ತಾಗುತ್ತದೆ ಎಂದರೆ ಸರಿ . ಅದೇ ಪ್ರಕಾರ ಈ ಎರಡು ಸಾಲದ ಅರ್ಜಿಗಳನ್ನು ಕೂಡ ಆಡಳಿತ ಮಂಡಳಿಗೆ ಕಳುಹಿಸಲಾಗಿತ್ತು . ಆಡಳಿತ ಮಂಡಳಿಯವರು ಸಾಲ ಮಂಜೂರಾಗಿದೆ ಎಂದು ಷರಾ ಬರೆದು ನಮಗೆ ಕಳುಹಿಸುತ್ತಾರೆ ಎಂದರೆ ಸರಿ . ನಿಪಿ-9 ಮತ್ತು ನಿಪಿ-10

ಪಿಡಬ್ಲೂಃ 1

ಸಾಲದ ಅರ್ಜಿಯಲ್ಲಿ ಆ ರೀತಿ ಷರಾ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಷರಾ ಠರಾವಿನಲ್ಲಿರುತ್ತದೆ ಎಂದು ನುಡಿದಿರುತ್ತಾರೆ . ಆಡಳಿತ ಮಂಡಳಿಯ ಠರಾವನ್ನು ನೋಡಿದರೆ ಮಾತ್ರ ಈ ಸಾಲ ಮಂಜೂರಾಗಿದೆಯೋ ಇಲ್ಲವೋ ಗೊತ್ತಾಗುತ್ತದೆ ಎಂದರೆ ಸರಿ . ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಅರ್ಜಿ ಮಂಜೂರಾಗಿದ್ದರೆ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ . ವೇತನಕ್ಕೆ ಸಂಬಂಧಪಟ್ಟಂತೆ ಸಾಲಗಾರರಿಂದ ಅವರ ವೇತನ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇವೆ . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಸದರಿ ವೇತನ ಪ್ರಮಾಣ ಪತ್ರ 2017 ರದ್ದು . ಸದರಿ ವೇತನ ಪ್ರಮಾಣ ಪತ್ರದಲ್ಲಿ ನೆಟ್ ಸ್ಯಾಲರಿ ಗ್ರಾಸ್ ಸ್ಯಾಲರಿ ನಮೂದಾಗಿರುತ್ತದೆ ಎಂದರೆ ದಾಖಲಾತಿ ನೋಡಬೇಕು . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ವೇತನ ಪ್ರಮಾಣ ಪತ್ರವನ್ನು ನಾವು ಪಡೆದುಕೊಂಡಿಲ್ಲ ಒಂದು ವೇಳೆ ಪಡೆದುಕೊಂಡರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆವು ಎಂದರೆ ಸಾಕ್ಷಿ ದಾಖಲಾತಿ ಪಡೆದುಕೊಂಡಿದ್ದೇವೆ ಎಂದು ನುಡಿದಿರುತ್ತಾರೆ. ವೇತನ ಸಾಲದ ಅರ್ಜಿಯಲ್ಲಿ ವೇತನದ ವಿವರಗಳನ್ನು ಬರೆದಿದ್ದೇವೆ . ಯಾವ ತಿಂಗಳ ಸ್ಯಾಲರಿ , ಎಷ್ಟು ಸ್ಯಾಲರಿ ಎಲ್ಲಾ ವಿವರಗಳನ್ನು ಬರೆದಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ನಿಪಿ-9 ರಲ್ಲಿ ಸದರಿ ವಿವರಗಳನ್ನು ನಮೂದು ಮಾಡಿದ್ದೇವೆ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.